ಶ್ರೀ ಎಸ್. ಮುನಿರಾಜು.—ಏಳೆಂಟು ಕೆರೆಗಳ ಕೆಳಗೆ ಇರತಕ್ಕ ಜಮೀನು ಸಾಗುವಳಿಗೆ ಬರುವುದರಿಂದ ಆಂಧ್ರ ಸರ್ಕಾರದವರ ಅನುಮತಿ, ಈ ಅಣೆಕಟ್ಟನ್ನು ಕಟ್ಟಲು, ಬೇಕಾಗಿಲ್ಲವೆಂಬುದು ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆಂಧ್ರ ಸರ್ಕಾರದವರ ಅನುಮತಿ ಬೇಕಾಗಿಲ್ಲವೆಂದು ಗೊತ್ತಿದ್ದರೆ, ಸರ್ಕಾರ ನಿಧಾನ ಮಾಡುತ್ತಿರಲಿಲ್ಲ. ಅವರ ಅನುಮತಿ ಬೇಕು ಎಂದು Law Department ನವರು ಅಭಿಪ್ರಾಯ ಕೊಟ್ಟಿದ್ದರಿಂದ ಅವರ ಅನುಮತಿಯನ್ನು ಕೇಳಲಾಗಿದೆ.

Repair of the Breached Bridge near Raravi, Siruguppa Taluk.

Q.—223. Sri B. E. RAMAIAH (Siruguppa).—

Will the Government be pleased to state :—

(*a*) whether they are aware of the fact that the causeway over the Hagari river near Raravi, Siruguppa Taluk, was constructed two years back at an estimated cost of about Rs. 4,25,000 ;

(*b*) whether they are also aware that a portion of it washed off within a fortnight of its opening to public traffic;

(*c*) whether they have taken any action so far to investigate the cause of early breach ;

(*d*) whether they propose to repair the same so as to provide facilities for traffic ?

A.—Sri H. K. VEERANNA GOWDH (Minister for Public Works).—

(*a*) Yes, at a cost of Rs. 3,35,000, in the year 1955.

(*b*) Yes.

(*c*) Yes.

(*d*) Yes.

ಶ್ರೀ ಬಿ. ಇ. ರಾಮಯ್ಯ.—(ಬಿ) ಭಾಗಕ್ಕೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಯಾವ ಕಾರಣದಿಂದ ಕೊಚ್ಚಿಕೊಂಡು ಹೋಯಿತು ಎಂಬುದನ್ನು ತಿಳಿಸುತ್ತೀರಾ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಮಳೆ ಹೆಚ್ಚಾಗಿ ಬದ್ದು ನೀರು ಹೆಚ್ಚಿಗೆ ಬಂದುದರಿಂದ ಕೊಚ್ಚಿಕೊಂಡು ಹೋಯಿತು.

ಶ್ರೀ ಬಿ. ಇ. ರಾಮಯ್ಯ.—ಈ ರೀತಿಯಾಗಲು ಕಂಟ್ರಾಕ್ಟರುಗಳದು ತಪ್ಪೇ ಅಥವಾ ಸೂಪರ್‌ವಿಷ್ ಮಾಡುತ್ತಿದ್ದ ಅಧಿಕಾರಿಗಳ ತಪ್ಪೇ ?

ಶ್ರೀ ಎಸ್. ಕೆ. ವೀರಣ್ಣಗೌಡ.—ಅದನ್ನು ವಿಚಾರ ಮಾಡಿ ತನಿಖೆ ಮಾಡಬೇಕಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಇದುವರೆಗೂ ಏನೂ ತನಿಖೆ ಮಾಡಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್ ಕೊಟ್ಟರೆ ನಿರ್ಧರವಾಗಿ ತಿಳಿಸುತ್ತೀನೆ.

ಶ್ರೀ ಬಿ. ಇ. ರಾಮಯ್ಯ.—ಕೊಚ್ಚಿಕೊಂಡು ಹೋಗಿರುವ ಭಾಗವನ್ನು ಸರಿಮಾಡಿಸಲು ಅಂದಾಜು ತಯಾರಾಗಿದೆಯೇ ?

ಶ್ರೀ ಎಂ. ಎಂ. ಪಾಟೀಲ್.—ಇಷ್ಟು ದೊಡ್ಡ ಮೊತ್ತವನ್ನು ಖರ್ಚುಮಾಡಿ ಕಟ್ಟಿರುವ ಕಟ್ಟಡದಲ್ಲಿ ನಷ್ಟವಾಗ ಬೇಕಾಗಿದ್ದರೆ ಕಟ್ಟಡದಲ್ಲಿ ಏನು ನ್ಯೂನತೆ ಬಂದಿದೆ ಎನ್ನುವುದನ್ನು ಪರೀಕ್ಷೆ ಮಾಡಿಸಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಮಗೆ ಬಂದಿರುವ ರಿಪೋರ್ಟ್ ಪ್ರಕಾರ ಒಂದೇ ದಿನದಲ್ಲಿ ಏಳೂವರೆ ಅಂಗುಲ ಮಳೆಬಂದು ಆಲೂರು ಕೆರೆಯಿಂದ ನೀರು discharge ಆಗಿ, ಹೆಚ್ಚು ನೀರು ಬಂದಿದ್ದರಿಂದ ಕೊಚ್ಚಿಕೊಂಡು ಹೋಯಿತು ಎಂದು ತಿಳಿಯುತ್ತದೆ. ವಿಚಾರಣೆ ಮಾಡಿದ ವಿಚಾರ ಇದರಲ್ಲಿಲ್ಲ. ನೋಟೀಸ್ ಕೊಟ್ಟರೆ ತರಿಸಿ ಹೇಳುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ಅಂದಾಜು ಎಷ್ಟಕ್ಕೆ ತಯಾರಾಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಬಗ್ಗೆ 45 ಸಾವಿರ ರೂಪಾಯಿಗೆ ತಯಾರಾಗಿದೆ.

ಶ್ರೀ ಬಿ. ಇ. ರಾಮಯ್ಯ.—ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಅಂದಾಜು ಮಂಜೂರಾಗಬೇಕು.

ಶ್ರೀ ಬಿ. ಇ. ರಾಮಯ್ಯ.—ಇದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಚೀಫ್ ಇಂಜಿನಿಯರ್ ಪರ್ಯಾಲೋಚನೆ ಮಾಡುತ್ತಿದ್ದಾರೆ. ಅವರಿಂದ ರಿಪೋರ್ಟ್ ಬಂದ ಮೇಲೆ ತಕ್ಕ ಏರ್ಪಾಡನ್ನು ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಕಂಟ್ರಾಕ್ಟರಿಗೆ ಹಣಪೆಲ್ಲ ಪಾವತಿಯಾಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್ ಬೇಕು.

ಶ್ರೀ ಟಿ. ತಾರೇಗೌಡ.—ಈ ಸೇತುವೆಯನ್ನು ಕಟ್ಟುತ್ತ ಇರುವಾಗ ಆ ಪ್ರದೇಶ ಮದರಾಸು ಪ್ರಾಂತಕ್ಕೆ ಸೇರಿತ್ತಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಳ್ಳಾರಿ ಜಿಲ್ಲೆಯಾಗ ಮೈಸೂರಿಗೆ ಸೇರಿತ್ತೆಂಬುದು ಸದಸ್ಯರಿಗೆ ಗೊತ್ತಿದೆ.

Excavation of a Channel to irrigate Lands under Gayathri Tank, Hiriyur Taluk.

Q.—219. Sri K. KENCHAPPA (Hiriyur).—

Will the Government be pleased to state :—

(*a*) whether it is a fact that only one sluice is constructed to the left bank of Gayathri Tank (Reservoir) constructed near Kariala in Javagondanahalli Hobli of Hiriyur Taluk, without excavating